# 4

# ಯೇಸು: ದೇವರು ನಮ್ಮೊಂದಿಗಿದ್ದಾನೆ

"ದೇವರು ನಮ್ಮೊಂದಿಗೆ ಇದ್ದಾನೆ" ಎಂಬ ಅರ್ಥವುಳ್ಳ *"ಇಮ್ಮಾನುವೇಲ್"* ಪದವು ಬೈಬಲ್‌ನಲ್ಲಿ ನಾಲ್ಕು ಸಲ ಕಂಡು ಬರುತ್ತದೆ. ಮೂರು ಸಲ (ಯೆಶಾಯ 7:14; 8:8, 10) ಹೆಚ್ಚಾಗಿ ನಿಷೇದಾರ್ಥಕವಾದ, ನಾಶಗೋಳಿಸುವ ಭಾವವನ್ನು ಸೂಚಿಸುತಿತ್ತು: ನಮ್ಮನ್ನು ದಂಡಿಸಲು ದೇವರು ನಮ್ಮೊಂದಿಗಿದ್ದಾನೆ. ಒಂದು ಸಲ (ಮತ್ತಾಯ 1:23) ಖಚಿತವಾದ ಅನ್ವಯಿಸುವಂತಾ ಅರ್ಥದಲ್ಲಿ: ನಮ್ಮನ್ನು ಆಶೀರ್ವಾದಿಸಲು ನಮ್ಮೊಂದಿಗೆ ಇದ್ದಾನೆ.

## ನಮ್ಮನ್ನು ಶಿಕ್ಷಿಸಲು ದೇವರು ನಮ್ಮೊಂದಿಗೆ ಇದ್ದಾನೆ

ಯೆಶಾಯ 7:14ರಲ್ಲಿ *"ಇಮ್ಮಾನುವೇಲ್"* ಪದದ ಮೊದಲನೆಯ ಉಪಯೋಗವು ಮಿಶ್ರ ಆಶೀರ್ವಾದವನ್ನು ವಿವರಿಸುತ್ತದೆ. ಅರಸ ಆಹಾಜನು ಮೋಸಗಾರನಾಗಿದ್ದನು. ಆಹಾಜನು ಆಳುತ್ತಿದ್ದ ರಾಜ್ಯವನ್ನು, ಯೆಹೂದವನ್ನು ಸಿರಿಯ ಮತ್ತು ಇಸ್ರಾಯೇಲುಗಳು ವಶಪಡಿಸಿಕೊಳ್ಳುವದಕ್ಕೆ ಬಿಡಲ್ಪಡುವದಿಲ್ಲವೆಂದು ಸಾರಿ ಹೇಳಲು ದೇವರು ಅವನ ಬಳಿಗೆ ಯೆಶಾಯನನ್ನು ಕಳುಹಿಸಿದನು. ದುಷ್ಟನೂ ವಿಗ್ರಹಾರಾಧಕನೂ ಆದ ಆಹಜನು ಯೆಶಾಯನು ಹೇಳಿದಕ್ಕೆ ಕಿವಿಗೊಡಲಿಲ್ಲ, ಯಾಕಂದರೆ ದುಷ್ಟನಾದ ಅರಸನು ದೇವರಲ್ಲಿ ನಂಬಿಕೆಯಿಡಲಿಲ್ಲ.

ದೇವರು ಯೆಹೂದವನ್ನು ಬಿಡುಗಡೆ ಮಾಡುವನೆಂಬುದನ್ನು ಪ್ರತ್ಯಕ್ಷಪಡಿಸಿ ತೋರಿಸಲು ಆಹಾಜನಿಗೆ ಯೆಶಾಯನು ಯಾವುದೇ ಸಂಕೇತ ಕೊಡಲು ಸಿದ್ಧ ನಾಗಿದ್ದನು "ಅದು ಪಾತಾಳದಷ್ಟು ಆಳದಲ್ಲಿದ್ದರೂ ಮೇಲಣ ಲೋಕದಷ್ಟು ಎತ್ತರದಲ್ಲಿದ್ದರೂ ಕೇಳಿಕೋ" ಎಂದು ಯೆಶಾಯನು ಹೇಳಿದನು (ಯೆಶಾಯ 7:11ಬಿ). ಆಹಾಜನು ಗುರುತನ್ನು ಕೇಳು ವದನ್ನು ನಿರಾಕರಿಸಿದನು. ಸಿರಿಯ ಮತ್ತು ಇಸ್ರಾಯೇಲಿಗೆ ವಿರುದ್ಧವಾಗಿ ಬಲವುಳ್ಳ ಅಸ್ಸೀರಿಯವನ್ನು ತನ್ನ ಮಿತ್ರ ರಾಜ್ಯವಾಗು ವಂತೆ - ಲಂಚಕೊಡುವ ವ್ಯವಹಾರದಲ್ಲಿ, ಅವನು ಕಪಟತನದಿಂದ ಭಕ್ತಿಯುಳ್ಳ ಉದ್ಗಾರತೆಗೆದನು: "ನಾನು ಕರ್ತನನ್ನು. ... ಪರೀಕ್ಷಿಸುವದಿಲ್ಲ" (ಯೆಶಾಯ 7:12). ಅಂಥ ಮೋಸತನದೊಂದಿಗೆ ದೇವರು ಬೇಸರ ಗೊಂಡನು, ಹಾಗೂ ಸಹಾಯ ಮಾಡುವ ಆತನ ತಾಳ್ಮೆಯು ತೀರಿ ಹೋಯಿತು. ದುಷ್ಟ ಆಹಾಜನಿಗೆ, ಅವನು ಬೇಡಿ ಕೊಳ್ಳದ ಗುರುತನ್ನು, ಶಿಕ್ಷೆಯ ಗುರುತನ್ನು ಕೊಡುವೆನೆಂದು ಸಾರಿದನು: "ಇದರಿಂದ ಕರ್ತನು ತಾನೇ ನಿಮಗೆ ಒಂದು ಗುರುತನ್ನು ಕೊಡುವನು. ಇಗೋ, ಒಬ್ಬ ಕನ್ಯಕೆಯು ಗರ್ಭಿಣಿಯಾಗಿ ಮಗನನ್ನು ಹೆತ್ತು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು." ಒಬ್ಬ ವಿಶೇಷ ಯೌವ್ವನದ ಮಹಿಳೆಯು *ha'almah* ಎಂದು ಕರೆಯಲ್ಪಡುವಳು, "ಯುವ ಮಹಿಳೆ," "ಕನ್ಯಕೆಯು" ಇಲ್ಲವೇ "ಕುಮಾರಿ"[1] ಎಂದರ್ಥ - ತಾಯಿಯಾಗುವಳು ಮತ್ತು ತನ್ನ ಮಗುವಿಗೆ *"ಇಮ್ಮಾನುವೇಲ್"* ಅಂದರೆ "ದೇವರು ನಮ್ಮ ಕೂಡ ಇದ್ದಾನೆ" ಎಂದು ಹೆಸರಿಡುವಳು. ಆಹಾಜನ ದಿನದ ಹಿನ್ನಲೆಯಲ್ಲಿ, ಮಗುವಿನ ಹೆಸುರು ಶಿಕ್ಷೆಯು

ಬರುವದನ್ನು ತಿಳಿಸಿತು. ದೇವರ ಸಂದರ್ಶನದಿಂದ ಯೆಹೂದವು ಬರಗಾಲವನ್ನು, ದುಃಖವನ್ನು, ಮುಳ್ಳುಗಳನ್ನು ಮತ್ತು ನೆಗ್ಗಿಲು ಮುಳ್ಳುಗಳನ್ನು ಅನುಭವಿಸುವುದು. ತಕ್ಷಣದ ಭಯಪಡಿಸುವಿಕೆಗಳು ಆಹಾಜನಿಂದ ತೆಗೆದು ಹಾಕಲ್ಪಡುವವು; ಆದರೆ ಅವನ ದುಷ್ಟತನವು ಮತ್ತು ಮೋಸಗಾರಿಕೆಯು ಪ್ರತಿಫಲ ಹೊಂದುವವು: ಆಶ್ಶೂರವು ಯೆಹೂದದ ಪಟ್ಟಣಗಳ ಮೇಲೆ ದಾಳಿ ಮಾಡಿ ಯೆರೂಸ ಲೇಮಿಗೆ ಮುತ್ತಿಗೆ ಹಾಕುವಂತೆ ದೇವರು ಬಿಡುವನು. ಕ್ಷಾಮವು ಬರಲಿಕ್ಕಿರುವುದು - ಒಬ್ಬ ಮನುಷ್ಯನು ಒಂದು ಹಸುವನ್ನು ಜೀವಿತವಾಗಿಟ್ಟುಕೊಂಡು, ದೇಶದಲ್ಲಿ ಕಾಡು ಜೇನು ತುಪ್ಪವನ್ನು ಕಂಡುಕೊಂಡರೆ, ಅವನು ಮೊಸರು ಮತ್ತು ಜೇನು ತುಪ್ಪದ ವಿರಳವಾದ ಆಹಾರವನ್ನು ಇಟ್ಟುಕೊಳ್ಳಲು ಶಕ್ತನಾಗುವನು. ವಿಶೇಷವಾದ ಮಗನು 'ಇಮ್ಮಾನುವೇಲನು' ಪ್ರವಾದಿಸಲ್ಪಟ್ಟ ಗುರುತು, ತಾನೇ, ಅಂಥ ಮಿತಿಯುಳ್ಳ ಆಹಾರಕ್ಕೆ ಕೆಳಗಿಳಿಸಲ್ಪಡುವನು. "ಇಮ್ಮಾನುವೇಲ್" ಪದದ ಮೊದಲನೆಯ ಉಪಯೋಗದ ಹಿನ್ನಲೆಯು, ಆದುದರಿಂದ, ಕಹಿಯಾದಸಿಹಿ - ಆದರೆ ಹೆಚ್ಚಾಗಿ ಕಹಿಯಾಗಿರುವುದು.

*'ಇಮ್ಮಾನುವೇಲ್'* ಪದದ ಎರಡನೆಯ ಉಪಯೋಗವು (ಯೆಶಾಯ 8:8) ಅದೇ ಹಿನ್ನಲೆಯ ಭಾಗವಾಗಿರುವುದು. ಯೆಹೂದ ನಾಡು ತಾನೇ *'ಇಮ್ಮಾನುವೇಲ್'* ಅಂದರೆ, ಯೆಹೂದ್ಯರ ಮೇಲೆ ದಂಡನೆಯನ್ನು ವಿಧಿಸಲು ದೇವರಿಂದ ಸಂದರ್ಶಿಸಲ್ಪಟ್ಟಿತು ಎಂದು ಕರೆಯಲ್ಪಟ್ಟಿದೆ.

ಅದರಂತೆಯೇ, *'ಇಮ್ಮಾನುವೇಲ್'* ಪದದ ಮೂರನೆಯ ಉಪಯೋಗವು (ಯೆಶಾಯ 8:10) ಮೊದಲಿನ ಎರಡು ಉಪಯೋಗಗಳಲ್ಲಿ ಕಂಡುಬಂದ ಅದೇ ಹಿನ್ನಲೆಯ ಭಾಗದಂತೆ ಶ್ರಮೆಯ ಕಹಿಯನ್ನು ಮುಂತಿಳಿಸಿತು. ಅಶ್ಶೂರ್ಯವನ್ನು ಸೋಲಿ ಸಲು ಆಲೋಚನೆ ತೆಗೆದು ಕೊಳ್ಳುವುದು ವ್ಯಾಕುಲಪಟ್ಟ ಹಾಗೂ ತೊಂದರೆಗೊಳಗಾದ ಯೆಹೂದ್ಯರಿಗೆ ನಿರುಪಯೋಗವಾದದ್ದೂ ವ್ಯರ್ಥವಾದದ್ದೂ ಆಗದೆ; ಯಾಕಂದರೆ, ಇಗೋ, *'ಇಮ್ಮಾನುವೇಲ್!* ದಬ್ಬಾಳಿಕೆ ನಡಿಸುವ ಅನ್ಯ ಸೈನ್ಯ ರೂಪದಲ್ಲಿ ದೇವರು ಯೆಹೂದದೊಂದಿಗೆ ಇದ್ದನು ಹಾಗೂ ದೇವರ ದೃಢತೆಯು ಅತೀ ಜಾಣೆಯುಳ್ಳ ಯೆಹೂದೀ ವಿಧಾನದಿಂದ ಕೆಡಿಸಲ್ಪಡುವದಿಲ್ಲ.

*'ಇಮ್ಮಾನುವೇಲ್'* ಪದದ ಹಳೇ ಒಡಂಬಡಿಕೆಯ ಮೂರು ಉಪಯೋಗಗಳಲ್ಲಿ ಯಾವುದೇ ಒಂದರಲ್ಲಿ ವಿನೋದವು ಕಂಡು ಬರುವದಿಲ್ಲ.

## ನಮ್ಮನ್ನು ಆಶೀರ್ವದಿಸಲಿಕ್ಕೆ ದೇವರು ನಮ್ಮೊಂದಿಗೆ ಇದ್ದಾನೆ

ಕೆಲವು ಪರಿಶುದ್ಧ ಬರಹಗಳು ಸಮೀಪದ ಹಾಗೂ ಬಹುದೂರದ ಎರಡು ಅರ್ಥಗಳೊಂದಿಗೆ ಯೋಚಿಸಲ್ಪಟ್ಟಿದ್ದವೆಂದು ಬೈಬಲ್ ವಿದ್ಯಾರ್ಥಿಗಳು ಬಹಳ ಹಿಂದೆಯೇ ಗಮನಿಸಿದ್ದಾರೆ. ಯೆಶಾಯ 7:14ಕ್ಕಿಂತ ಬೇರಾವುದೂ ಹೆಚ್ಚು ಪ್ರಸಿದ್ಧವಾಗಿಲ್ಲ. ಆಹಾಜನ ದಿನಗಳಲ್ಲಿಯ *'ಇಮ್ಮಾನುವೇಲ್'* ಎಂದು ಕರೆಯಲ್ಪಟ್ಟ ಮಗುವು, ಅದು ಧರಿಸಿದ ಹೆಸರಿನಿಂದ ಅಪಶಕುನವಾಗಿತ್ತು. ಯೆಹೂದವನ್ನು ಶಿಕ್ಷಿಸಲು ದೇವರು ಅವರೊಂದಿಗೆ ಇದ್ದನು. ಹಾಗಿದ್ದರೂ, ಎಂಟನೆಯ ಶತಮಾನದ ಪರಿಶುದ್ಧ ಬರಹದಲ್ಲಿ ಇನ್ನೊಂದು ಮುಂತಿಳಿಸುವಿಕೆಯು ಅಡಗಿತ್ತು. ಇಮ್ಮಾನುವೇಲ್ ಎಂದು ಕರೆಯಲ್ಪಟ್ಟ ಇನ್ನೊಂದು ಮಗುವು ಯೋಸೇಫ ಮತ್ತು ಮರಿಯಳ ದಿನಗಳಲ್ಲಿ ಜನಿಸಬೇಕಾಗಿತ್ತು (ಮತ್ತಾಯ 1:23). ಆತನು ಧರಿಸಿದ ಹೆಸರಿನಿಂದ ಮಾತ್ರವೇ ಅಲ್ಲ, ಆದರೇ ಆತನಿಗೆ ಮಾನವ ತಂದೆಯಿಲ್ಲದ್ದರಿಂದ ಆತನೂ ಸಹ ಒಂದು ಗುರುತು ಆಗಿರುವನು. ಆತನು ನಿಜ ವಾಗಿಯೂ "ದೇವರು ನಮ್ಮೊಂದಿಗೆ ಇದ್ದಾನೆ" ಆಗಿದ್ದನು.

ಯೇಸುವಿಗೆ ಮಾನವ ತಂದೆಯಿದ್ದರೆ, ಆಗ ಬೇರೊಬ್ಬ ಮಗುವಿಗಿಂತ ಭಿನ್ನವಾಗಿರದ ಅರ್ಥದಲ್ಲಿ 'ಇಮ್ಮಾನುವೇಲ್,' "ದೇವರು ನಮ್ಮೊಂದಿಗೆ ಇದ್ದಾನೆ" ಆಗಿರುತ್ತಿದ್ದನು. ತಂದೆತಾಯಿಗಳಿಬ್ಬರ ಇತರ ಎಲ್ಲಾ ಮಕ್ಕಳಿರುವಂತೆಯೇ ಇರುತ್ತಿದ್ದನು, ಹೀಗೆ ತನ್ನ ಅದ್ವಿತೀಯತೆಯನ್ನು ಕಳೆದು ಕೊಳ್ಳುತ್ತಿದ್ದನು. ಯೇಸುವನ್ನು *ಇಮ್ಮಾನುವೇಲ್* ಎಂದು ಕರೆಯುವದರಲ್ಲಿ ಎಂಟನೆಯ ಶತಮಾನದ ಮಗುವಿಗೆ ಹೆಸರಿಡುವಲ್ಲಿ ಎಷ್ಟೋ ಹೆಚ್ಚಾದದ್ದು ಒಳಗೊಂಡಿತ್ತು. ಆಹಾಜನ ದಿನದ ಅಪರಿಚಿತ ಯುವಕನು ತನ್ನಲ್ಲಿ ಯಾವದೇ ರೀತಿಯಲ್ಲಿ ಅದ್ವಿತೀಯನಾಗಿರಲಿಲ್ಲ; ಅವನ ಹೆಸರು ಮಾತ್ರವೇ ರೋಷದಲ್ಲಿ ದೇವರ ಸಂದರ್ಶನದ ಗುರುತಾಗಿತ್ತು. ಯೋಸೇಫನ ದಿನದ ಪ್ರಸಿದ್ಧನಾದ ಯುವಕನು ತನ್ನಲ್ಲಿಯೇ ಅದ್ವಿತೀಯ ನಾಗಿದ್ದನು; ಆತನು ತನ್ನ ಹೆಸರಿನಿಂದ ಒಂದು ಗುರುತಿಗಿಂತ ಹೆಚ್ಚಾಗಿದ್ದನು; ಆತನು ದೇಹದಲ್ಲಿ ದೇವರ ಸಂದರ್ಶನವಾಗಿದ್ದನು.

ಮತ್ತಾಯ 1:23ರಲ್ಲಿಯ *'ಇಮ್ಮಾನುವೇಲ್‌ನ'* ಮಹಿಮೆಗೆ ವಿಚಾರದ ಸೌಂದರ್ಯದಲ್ಲಿ ಹೋಲಿಸಿ ಇಮ್ಮಾನುವೇಲ್ ಕಂಡು ಬರುವ ಯೆಶಾಯ 7 ಮತ್ತು 8 ಮತ್ತು ಇತರ ಸ್ಥಳಗಳಲ್ಲಿ ಯಾವುದೂ ಕಂಡು ಬರುವದಿಲ್ಲ. ಹೊಸ ಒಡಂಬಡಿಕೆಯ ಉಪಯೋಗದಲ್ಲಿ, ದೇವರು "ತೀರ್ಪುಮಾಡುವದಕ್ಕಾಗಿ" ನಮ್ಮೊಂದಿಗಿರಲು ಬರಲಿಲ್ಲ (ಯೋಹಾನ 3:17), ಆದರೆ "ಆತನ ಮುಖಾಂತರ ನಾವು ರಕ್ಷಿಸಲ್ಪಡುವದಕ್ಕಾಗಿ" ಬಂದನು. *'ಇಮ್ಮಾನುವೇಲ್‌ನ'* ಹಳೇ ಒಡಂಬಡಿಕೆಯ ಉಪಯೋಗಕ್ಕೆ "ದಾವೀದನ ಮನೆತನಕ್ಕಾಗಿ" ಕೇವಲ ಸ್ಥಳಿಕ ಅರ್ಥವಿರುತ್ತದೆ (ಯೆಶಾಯ 7:13). ಹೊಸ ಒಡಂಬಡಿಕೆಯ ಉಪಯೋಗಕ್ಕೆ "ಇಡೀ ಜಗತ್ತಿಗಾಗಿ" ಮಹತ್ವವುಳ್ಳದ್ದಾಗಿದೆ (1 ಯೋಹಾನ 2:2).

ಇಗೋ, *'ಇಮ್ಮಾನುವೇಲ್,'* ದೇವರ ಸ್ವಭಾವದ ನಿಶ್ಚಿತ ಪ್ರತಿನಿಧಿಸುವಿಕೆಯು ದೇಹವಾಯಿತು (ಇಬ್ರಿಯ 1:3; ಯೋಹಾನ 1:14). ದೇವರಾಗಿದ್ದಾತನು ತನ್ನ ಸ್ವಂತ ಸೃಷ್ಟಿಗೆ ಬಂದನು ಮತ್ತು ಮಾಂಸ, ರಕ್ತದ ಭಾಗಿಯಾದನು (ಯೋಹಾನ 1:1, 11; ಇಬ್ರಿಯ 2:14). "ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ಅವತರಿಸಿ ವಾಸ ಮಾಡುತ್ತದೆ" (ಕೊಲೊಸ್ಸೆ 2:9). ದೇವರು ಕ್ರಿಸ್ತನಲ್ಲಿ ಇದ್ದನು. (ಯೋಹಾನ 10:37, 38; 14:10, 11, 20ಎ). "... ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದ್ದನೆಂಬುದೆ. ಅದನ್ನು ಸಾರುವ ಸೇವೆಗೆ ನಮ್ಮನ್ನು ನೇಮಿಸಿದ್ದಾನೆ" (2 ಕೊರಿಂಥ 5:19).

---

ಟಿಪ್ಪಣಿ

[1] *'Almah* ಎಂಬುದು ಶಬ್ದ ಉತ್ಪತ್ತಿಯಿಂದ ಮದುವೆಯಾದ ಇಲ್ಲವೇ ಮದುವೆಯಾಗದ ಯುವತಿ ಎಂದು ಅರ್ಥಕೊಡಬಹುದು (*'elem,* ಯುವಕನು, 1 ಸಮುವೇಲ 17:56; 20:22 ಎಂಬಲ್ಲಿಯಂತೆ), ಆದರೆ ಮದುವೆಯಾದ *'almah* ಎಂಬುದು ಬೈಬಲಿನ ಹಿನ್ನಲೆಯಲ್ಲಿ ಇರುವದಿಲ್ಲ. "ಮದುವೆಗೆ ಯೋಗ್ಯವಾದ ಆದರೆ ಮದುವೆಯಾಗದ" ಎಂಬುದು *'almah*ದ ಹಳೇ ಒಡಂಬಡಿಕೆಯ ಏಳು ಉಲ್ಲೇಖಗಳಿಗೆ ಅನ್ವಯಿಸಿದ ಒಂದು ನಿರೂಪಣೆಯಾಗಿದೆ. (ಆದಿಕಾಂಡ 24:43; ವಿಮೋಚನಾಕಾಂಡ 2:8; ಕೀರ್ತನೆ 68:25; ಜ್ಞಾನೋಕ್ತಿ 30:19; ಪರಮಗೀತ 1:3; 6:8; ಯೆಶಾಯ 7:14). *'Almah*ದ ಉಪಯೋಗದಿಂದ (*'ishsha* ಅರ್ಥ "ಮಹಿಳೆ, ಹೆಂಡತಿ," ಇಲ್ಲವೇ *negebah,* "ಸ್ತ್ರೀ" ಎಂಬುದರ ಬದಲಾಗಿ), ಯೆಶಾಯ 7:14 ಮದುವೆಯಾಗದ ಬಾಲಕಿಯನ್ನು ಭಾವಿಸುತ್ತದೆಂದು ಸೂಚಿಸುತ್ತದೆ. ಹಾಗಿದ್ದರೂ ಇದು

ಆಹಾಜನ ದಿನಗಳಿಗಾಗಿ ಕನ್ಯೆಯಿಂದ ಜನನವು ಮುಂತಿಳಿಸಲ್ಪಟ್ಟಿತೆಂದು ಅರ್ಥವಾಗುವದಿಲ್ಲ. ಯೆಶಾಯನು ಮಾತಾಡುತ್ತಿದ್ದ ಸಮಯದಲ್ಲಿ ಕನ್ಯೆಯಾಗಿದ್ದ ಒಬ್ಬಾಕೆಯು ಅನಂತರದಲ್ಲಿ ತಾಯಿಯಾಗುವಳು ಎಂದು ಮಾತ್ರವೇ ಪಠ್ಯವು ಹೇಳುತ್ತದೆ. ಯೋಸೆಫ ಮತ್ತು ಮರಿಯಳ ದಿನಗಳಲ್ಲಿ ವಿಷಯವು ಬಹಳ ಭಿನ್ನವಾಗಿರುತ್ತದೆ. ಮತ್ತಾಯ 1:23ರ ಹಿನ್ನೆಲೆಗೆ ಕನ್ಯೆಯಿಂದ ಜನನದ ರೀತಯ ವ್ಯಾಖ್ಯಾನವು ನ್ಯಾಯ ಮಾಡುವದಿಲ್ಲ. (ಪದಗಳಿಗೆ ಕೆಲವು ಸಲ ವಿರಲವಾದ ಉಪಯೋಗಗಳಿರುತ್ತವೆ. *Bethulah* and *parthenos*, ಮಾತುಗಳನ್ನು ಸಮಾನ್ಯವಾಗಿ ಕನ್ಯತ್ವಕ್ಕಾಗಿ ಸ್ಪಷ್ಟವಾದವುಗಳಂತೆ ಯೋಚಿಸಲ್ಪಟ್ಟಿವೆ, ಸಂದರ್ಭದಲ್ಲಿ ಕನ್ಯತ್ವವಿಲ್ಲದವರ ಬಗ್ಗೆ ಉಪಯೋಗಿಸಲ್ಪಟ್ಟಿವೆ; ಯೋವೇಲ 1:8; ಆದಿಕಾಂಡ 34:3; LXX.*)*

© 2009 Truth for Today